

**ಒಬ್ಬ ಮಾಯಾಂಗನೆ ಎಲ್ಲಿಂದಲೋ ಪ್ರತ್ಯಕ್ಷವಾಗಿ 'ನಿಮ್ಮ ಟೂಥ್ ಪೇಸ್ಟ್‌ನಲ್ಲಿ ಉಪ್ಪು ಇದೆಯೇ' ಎಂದು ನೋಡುಗರ ಬಾಯಿಗೇ ಮೈಕ್ ಹಿಡಿಯುತ್ತಾಳೆ. ಆ ಮನುಷ್ಯನೆಂಬ ಪ್ರಾಣಿ ಕಕ್ಕಾಬಿಕ್ಕಿಯಾಗಿ ಹೌಹಾರುತ್ತಾನೆ.**

ಬಂದಿದ್ದರೆ ಆಶ್ಚರ್ಯವೇನಿಲ್ಲ.

ಕೆಲವು ಕಂಪನಿಗಳು ಸಾವಿರಾರು ವರ್ಷಗಳ ರಸಾಯನವನ್ನು ಅರೆದು ನಮಗೆ ಕೊಡುತ್ತಿರುವುದಾಗಿ ಹೇಳುತ್ತಿವೆ. ಅಲೋಪತಿಯವರು ತಮ್ಮ ಉತ್ಪನ್ನಗಳನ್ನೂ ಸಸ್ಯಜನ್ಯ ಎಂಬಂತೆ ಬಿಂಬಿಸುತ್ತಿದ್ದಾರೆ. ಒಂದಂತೂ 'ವೇದ ಶಕ್ತಿ'ಯಾಗಿ ನಮಗೆ ನಾಲ್ಕು ವೇದಗಳ ಸಾರವನ್ನೇ ತಿನ್ನಿಸುತ್ತದೆ. ಸದ್ಯ, ಪುರಾಣ ಕಾಲದ ಹೀರೋಗಳು ಇದನ್ನೇ ಬಳಸುತ್ತಿದ್ದರು ಎಂದು ಯಾರೂ ಹೇಳುತ್ತಿಲ್ಲ. ದಶಕಂಠನಾದರೆ ಏನು ಗತಿ. ಅವನ 32X10 ಹಲ್ಲು ಸೆಟ್ಟುಗಳಿಗೆ ಯಾವ ದಂತಮಂಜನ ಒಪ್ಪುತ್ತಿತ್ತು ಎಂಬುದೇ ಜಿಜ್ಞಾಸೆ. ಏಕೆಂದರೆ, ಅವನು ಮೊದಲೇ ದಾನವ ವೀರ; ಅವನ ಒಂದೊಂದು ತಲೆ ಒಂದೊಂದು ರೀತಿ ಯೋಚನೆ ಮಾಡಿ, ಒಂದೊಂದಕ್ಕೂ ಬೇರೆ ಬೇರೆ ರೀತಿಯ ಪೇಸ್ಟ್ ಕೇಳುತ್ತಿದ್ದನೇನೋ. ಇಂಥ ಪ್ರಶ್ನೆಗಳಿಗೆಲ್ಲ ನಮ್ಮ ಪುರಾಣೇತಿಹಾಸಕಾರರೇ ಉತ್ತರಿಸಬೇಕು. ಆದರೂ ಒಂದು ತಲೆನೋವು ನಿವಾರಕ ಪೇಸ್ಟ್ ಒಂದರಲ್ಲೇ ಹತ್ತೂ ತಲೆಗಳ ನೋವು ನಿವಾರಿಸಿದೆ. ಇದೊಂದು ನಮ್ಮ ಆಧುನಿಕ ಧನ್ವಂತರಿಗಳ ವಿಕ್ರಮವೆಂದೇ ಹೇಳಬೇಕು.

ಸದ್ಯ, ದೇವ ದಾನವರ ಪಾಡು ಬಿಡಿ. ಏಕೆಂದರೆ ಅವರಿಗೆ ಬೇಕೆಂದರೆ ಸಮುದ್ರ ಮಥನ ಮಾಡಿಕೊಳ್ಳುತ್ತಾರೆ. ಅವರು ಜಗಳವಾಡಿದರೆ ಅವರನ್ನು ಸೆಳೆಯಲು ಮೋಹಿನಿ ಇದ್ದೇ ಇರುತ್ತಾಳೆ. ನಮಗೆ ಮಥನ ಮಾಡುತ್ತಿರುವವರು ಹಲವು ದೇಶೀಯ, ಪರದೇಶೀಯ ಸಂಸ್ಥೆಗಳು. ಇವು ಆಗಿಂದಾಗ್ಗೆ ಹೊಸ ಹೊಸದನ್ನು ಅರೆದು ಬಳಿದು ನಮಗೆ ಕೊಡುತ್ತವೆ. ಈಗಂತೂ ಒಬ್ಬ ಮಾಯಾಂಗನೆ ಎಲ್ಲಿಂದಲೋ ಪ್ರತ್ಯಕ್ಷವಾಗಿ 'ನಿಮ್ಮ ಟೂಥ್ ಪೇಸ್ಟ್‌ನಲ್ಲಿ ಉಪ್ಪು ಇದೆಯೇ' ಎಂದು ನೋಡುಗರ ಬಾಯಿಗೇ ಮೈಕ್ ಹಿಡಿಯುತ್ತಾಳೆ. ಆ ಮನುಷ್ಯನೆಂಬ ಪ್ರಾಣಿ ಕಕ್ಕಾಬಿಕ್ಕಿಯಾಗಿ ಹೌಹಾರುತ್ತಾನೆ. ಇದೇ ರೀತಿಯ ಇನ್ನೊಂದು ದೃಶ್ಯವೆಂದರೆ ರೈಲು ಪ್ರಯಾಣ ಮಾಡುತ್ತಿರುವ ಕುಟುಂಬದ ಮುಖ್ಯಸ್ಥೆ ಯಾವುದೋ ಗಟ್ಟಿ ಪದಾರ್ಥವನ್ನು ಅವಳ ಹಲ್ಲುಗಳಿಂದ ಕಚ್ಚಿ 'ಹಾ' ಎನ್ನುವುದೇ ತಡ ಮತ್ತೆ ಬಂತು ಉಪ್ಪಿನ ಜ್ಞಾನ. ಆಕೆಯೂ ಸಂತೋಷದಿಂದ ಉಪ್ಪಿನ ಧ್ಯಾನ ಮಾಡುತ್ತಾ ಹಲ್ಲು ಕಿರಿಯುತ್ತಿರುತ್ತಾಳೆ. ಈ ಉಪ್ಪಿನ ಕಥೆಯ ಮುಂದುವರಿದ ಭಾಗವಾಗಿ ಮೊನ್ನೆಯ ವಿಶ್ವ 'ಮಧು ಮೇಹ ದಿನ' ಆಚರಣೆಯ ಸಂಧರ್ಭದಲ್ಲಿ ಒಂದು ಪೇಸ್ಟ್ ತಯಾರಿಕಾ ಸಂಸ್ಥೆಯ ಹೊಸ ಜಾಹೀರಾತಿನಂತೆ ಮಧು ಮೇಹಿಗಳಿಗೆ ಪ್ರತ್ಯೇಕ ಟೂಥ್ ಪೇಸ್ಟ್ ಅಂತೆ. ಅದನ್ನು ಬಳಸದಿದ್ದರೆ ಬಾಯಿಯ ಮುಖಾಂತರ ಸಕ್ಕರೆ ಕಾಯಿಲೆ ಬರಬಹುದಂತೆ. ಇದನ್ನು ಮೀರಿಸಿದ್ದು ಇನ್ನೊಂದು ಸಂಸ್ಥೆಯ ಜಾಹೀರಾತು. ಅವರು ಕೊರೊನಾ ಬೇರೆ ಬೇರೆ ರೂಪದಲ್ಲಿದ್ದು ಇನ್ನೂ ಹೋಗಿಲ್ಲ. ಹಾಗಾಗಿ ಅವರು ಓಮಿಕ್ರಾನ್ ವಿರುದ್ಧ ಒಂದು ದಂತ ಧಾವನ ಬಿಡುಗಡೆ ಮಾಡಿದ್ದಾರಂತೆ. ಈ ಉಪ್ಪಿನ ಆಟ ಎಷ್ಟಿದೆಯೆಂದರೆ, ಕಿರಾಣಿ ಅಂಗಡಿಗೆ ಹೋಗಿ ಉಪ್ಪು ಕೇಳಿದರೆ, ಟೂಥ್ ಪೇಸ್ಟ್ ಕೊಡುತ್ತಾರಂತೆ.

ಇವರುಗಳ ಉಪ್ಪಿನ ಗ್ಯಾನ, ಧ್ಯಾನದ ಕೆನೆತ ಹೇಷಾರವ ಹೇಗಿರುತ್ತದೆಂದರೆ ನಾವು ನೋಡದ ಸ್ವತಂತ್ರ ಪೂರ್ವದ ಉಪ್ಪಿನ ಸತ್ಯಾಗ್ರಹವನ್ನು ಕಂಡಂತೆ ಅಂದರೆ ಬಿಳಿಯ ಉಪ್ಪು ಅದೇ ಆದರೂ ಅದನ್ನು ಬಗೆ ಬಗೆಯ ಬಣ್ಣಗಳಿಂದ ನಮಗೆ ಕಣ್ಣು ಕೋರೈಸುವಂತೆ ಮಾಡುತ್ತದೆ. ಇಂತಹ ಉಪ್ಪಿನ ಜ್ಞಾನ ಆಗಲೇ ಆಗಿದ್ದಿದ್ದರೆ ಬ್ರಿಟಿಷರಿಗೆ ಗಾಂಧೀಜಿಯವರು ಮತ್ತು ಇತರೆ ಸಾವಿರಾರು ಸತ್ಯಾಗ್ರಹಿಗಳನ್ನು ಸೆರೆಮನೆಯಲ್ಲಿ ಕೂಡಿ ಹಾಕುವ ಕಷ್ಟವೇ ಇಲ್ಲದೆ ಅವರ ರಾಣಿಗೆ ಸೆಲ್ಯೂಟ್ ಮಾಡಿ ನಮ್ಮ ದೇಶ ಖಾಲಿ ಮಾಡುತ್ತಿದ್ದರೆನಿಸುತ್ತದೆ.

ನಮ್ಮವರದೇ ಆದ ಆಂಕರ್ ಟೂಥ್ ಪೇಸ್ಟ್‌ನ ಒಂದು ವಿಡಿಯೊ ಜಾಹೀರಾತಿನಲ್ಲಿ ಹೊಸದಾಗಿ ಮದುವೆಯಾದ ಹೆಣ್ಣೊಬ್ಬಳು ತನ್ನ ನವ ಪತಿಯನ್ನು ಹೊಸ ರುಚಿಯಿಂದ ಸಂತುಷ್ಟಗೊಳಿಸಲು ಕೇಕ್ ತಯಾರಿಸುತ್ತಾಳೆ. ಅವಳು ಮಾಡಿದ ಅತಿ ಉತ್ಸಾಹದ ಕೇಕ್ ದಪ್ಪ ಕಲ್ಲಿನಂತಾಗಿರುತ್ತದೆ. ಅದನ್ನು ಹಿಡಿದು ಅವಳು ಕುಣಿಯುವಾಗ ಅದು ಗೋಡೆಗೆ ಹೊಡೆದು ಗೋಡೆಯ ಒಂದು ಪದರವೇ ಕಿತ್ತು ಬರುತ್ತದೆ. ಗಂಡ ಬಂದವನೇ ಖುಷಿಯಾಗಿ ಅದಕ್ಕೆ ಬಾಯಿ ಹಾಕುವುದನ್ನು ಅವಳು ತಡೆದರೂ ಬಿಡದೆ ಅವನು ಅದನ್ನು ಕಚ್ಚಿ ತನ್ನ ಹಲ್ಲು ಬೀರುತ್ತಾನೆ. ಇಲ್ಲಿ ಈ ಪೇಸ್ಟ್‌ನಲ್ಲಿ ಉಜ್ಜಿದ ಹಲ್ಲುಗಳು ಏನನ್ನಾದರೂ ಕಡಿದು ಹಾಕಬಹುದು ಎಂಬುದು ಅರ್ಥವಂತೆ. ಇನ್ನೊಂದು ಅಮೆರಿಕನ್ ಜಾಹೀರಾತಿನಲ್ಲಿ ಹೆಣ್ಣಿನ ಹಲ್ಲು ಬೀರುವಿಕೆಯೇ ಅವಳ ಪ್ರಿಯಕರನ ಕೆನ್ನೆಗೆ ತುಟಿಯ ಗುರುತು ಮೂಡಿಸಿರುತ್ತದೆ. ಮತ್ತೊಂದು ನಮ್ಮದೇ ಜಾಹೀರಾತಿನಲ್ಲಿ ಒಬ್ಬ ಆಟೊ ಚಾಲಕ ಮತ್ತು ಹುಡುಗನ ಮಧ್ಯೆ ಅವನು ಕೇಳಿದ ಹೆಚ್ಚಿನ ಹಣದ ವಿಚಾರವಾಗಿ ದೊಡ್ಡ ವಾಗ್ಯುದ್ಧ ಆಗುತ್ತದೆ. ಕಡೆಗೆ ಆ ಚಾಲಕ ಹುಡುಗನ ಹಲ್ಲು ಮುರಿಯುತ್ತೇನೆ ಎಂದಾಗ ಆ ಬಾಲಕ ತನ್ನ ಹಲ್ಲಿನಲ್ಲಿ ಕಬ್ಬು ಜಗಿದು ತೋರಿಸುತ್ತಾನೆ. ನೋಡಿ ನಮ್ಮ ದಂತ ಮಂಜನಗಳು ಹಲ್ಲಿನ ಬಗ್ಗೆ ಎಷ್ಟು ನಿಗಾ ವಹಿಸುತ್ತವೆ! ದೇಶ ವಿದೇಶಗಳಲ್ಲಿ ಈ ಟೂಥ್ ಪೇಸ್ಟ್‌ಗಳ ಜಾಹೀರಾತಿಗಾಗಿಯೇ ಕೋಟ್ಯಾಂತರ ಡಾಲರ್ ಹಣವನ್ನು ವ್ಯಯಿಸುತ್ತಾರಂತೆ. ಇವುಗಳ ಜೊತೆಗೇ ಟೂಥ್ ಬ್ರಷ್‌ಗಳ ಬಗ್ಗೆ ಹೇಳದಿದ್ದರೆ ಹೇಗೆ? ಅವುಗಳೂ ಮೃದು, ಗಡಸು, ಹೇಗೆ ಬೇಕಾದರೂ ತಿರುಗುವಂತಹುದು, ಇದ್ದಿಲು ಮಿಶ್ರಿತ ಮತ್ತು ಇವೆಲ್ಲದರ ಜತೆಗೆ ವಿದ್ಯುತ್ ಚಾಲಿತ ಬ್ರಷ್‌ಗಳು ಬೇರೆ. ಟೂಥ್ ಬ್ರಷ್‌ಗಳಿಲ್ಲದಿದ್ದರೆ ಈ ತರಾವರಿ ಟೂಥ್ ಪೇಸ್ಟುಗಳೆಲ್ಲ ವೇಷ್ಟೇ. ಮೊನ್ನೆ ಇನ್ನೊಂದು ನೋಡಿದೆ. ಅದು ಅರಿಶಿನ ಮಿಶ್ರಿತವಂತೆ. ಹಲ್ಲು ಬಿಳಿಯಾಗಿಸುತ್ತೋ ಇಲ್ಲ ಹಳದಿಯಾಗಿಸುತ್ತೋ ಗೊತ್ತಿಲ್ಲ. ನಾನಂತೂ ಬಲಿ ಪಶುವಾಗಲಾರೆ .

ಇವೆಲ್ಲ ಏನೇ ಇರಲಿ ನಮಗೆ ಈಗಲೂ ಪಕ್ಕದ ರಾಜ್ಯದ ಆದರೆ ಹೊರ ದೇಶಗಳಲ್ಲೂ ಹೆಸರುವಾಸಿಯಾಗಿರುವ ಗೋಪಾಲ್ ಪಲ್ಲು ಪುಡಿ ಮತ್ತು ನಮ್ಮ ಮನೆಯ ಆವರಣದ ನಂಜನಗೂಡು ಹಲ್ಲು ಪುಡಿಯ ಸ್ವಾದ ಇವಕ್ಕೆಲ್ಲ ಸೆಡ್ಡು ಹೊಡೆಯುವಂತಿರುತ್ತದೆ.

ಪ್ರತಿಕ್ರಿಯಿಸಿ: feedback@sudha.co.in